**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ
ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 26/2019
ಪಿಡಬ್ಲು : 3 ಸಿಡಬ್ಲು :4

| | |
|---|---|
| ಸಾಕ್ಷಿಯ ಹೆಸರು | : ಶ್ರೀ ದೀಪಕ ತಮ್ಮಣ್ಣ ಗಾಣಿಗೇರ |
| ತಂದೆಯ ಹೆಸರು | : ಶ್ರೀ ತಮ್ಮಣ್ಣ ಗಾಣಿಗೇರ |
| ವಯಸ್ಸು | : 41 ವರ್ಷ |
| ಉದ್ಯೋಗ | : ಆಟೋ ಚಾಲಕ |
| ವಾಸ್ತವ್ಯ | : ಚಿಕ್ಕೋಡಿ |
| ದಿನಾಂಕ | : 27-10-2023 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನನಗೆ ಚಾಸಾಃ 5 ರವರ ಪರಿಚಯ ಇರುವುದಿಲ್ಲ. ಈಗ 5-6 ವರ್ಷಗಳ ಹಿಂದೆ ಡಿ.ವಾಯ್.ಎಸ್.ಪಿ. ಚಿಕ್ಕೋಡಿಯವರು ನನ್ನನ್ನು ಚಿಂಚಲಿ ಗ್ರಾಮದ ಒಂದು ಜಮೀನಿಗೆ ಪಂಚರಾಗಿ ಕರೆದುಕೊಂಡು ಹೋಗಿದ್ದರು. ಸದರಿ ಸ್ಥಳದಲ್ಲಿ ನನ್ನನ್ನು ಮತ್ತು ಇತರರನ್ನು ನಿಲ್ಲಲು ಹೇಳಿದ್ದು, ಆಗ ನಾವು ಅಲ್ಲಿ ನಿಂತುಕೊಂಡಿದ್ದು, ಪೋಲೀಸರು ಪೋಟೋವನ್ನು ತೆಗೆದಿದ್ದು, ನಂತರ ಠಾಣೆಗೆ ಕರೆದುಕೊಂಡು ಹೋಗಿ 2 ದಾಖಲೆಗಳ ಮೇಲೆ ಸಹಿ ತೆಗೆದುಕೊಂಡಿರುತ್ತಾರೆ. ಯಾವ ಕಾರಣಕ್ಕೆ ಸಹಿ ಮಾಡಬೇಕೆಂದು ಪೋಲೀಸರನ್ನು ನಾನು ಕೇಳಿದ್ದು, ಆಗ ಸದರಿಯವರು ನನಗೆ ಏನೂ ಹೇಳದೇ ಸಹಿ ಮಾಡಲು ತಿಳಿಸಿದ್ದು, ಅವರ ಕೋರಿಕೆಯಂತೆ ನಾನು ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಪೋಲೀಸರು ಯಾವುದೇ ಕಾಗದ ಪತ್ರಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಆ ದಿನ ಪೋಲೀಸರು ನನಗೆ ಯಾವುದೇ ಆರೋಪಿತರನ್ನು ತೋರಿಸಿರುವುದಿಲ್ಲ. 2 ನೇ ಆರೋಪಿ ಗದ್ದಮರಂಗಯ್ಯ @ ರಾಮಯ್ಯ ರವರು ನನ್ನ ಸಮಕ್ಷಮ ಪೋಲೀಸರಿಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಇಷ್ಟನ್ನು ಹೊರತು ಪಡಿಸಿ ನನಗೆ ಬೇರೆ ಯಾವುದೇ ವಿಷಯ ಗೊತ್ತಿರುವುದಿಲ್ಲ.

2. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ದಾಖಲೆಗಳನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದಾಖಲೆಗಳ ಜಪ್ತು ಪಂಚನಾಮೆಯಾಗಿದ್ದು ಅದನ್ನು ನಿಪಿಃ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 3 ಎ ಎಂದು

ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ಇನ್ನೊಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಅಪರಾಧ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ನಿಪಿಃ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 4 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ಇನ್ನೆರಡು ದಾಖಲೆಗಳನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಪೋಲೀಸರು ಕಲಂ 160 ಅಡಿಯಲ್ಲಿ ನೀಡಿದ ನೋಟೀಸಾಗಿದ್ದು, ಅವುಗಳನ್ನು ಕ್ರಮವಾಗಿ ನಿಪಿಃ 5, 6 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ5 ಎ, 6 ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ಒಂದು ಪೋಟೋವನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿ ತಾನು, ಡಿ.ವಾಯ.ಎಸ್.ಪಿ. ಪೋಲೀಸ ಸಿಬ್ಬಂದಿ ಹಾಗೂ ಇತರರು ಇರುವುದಾಗಿ, ಅದನ್ನು ಚಿಂಚಲಿ ಗ್ರಾಮದ ಒಂದು ಜಮೀನಿನಲ್ಲಿ ತೆಗೆಯಲಾಗಿದೆ ಎಂದು ನೋಡಿ ಗುರುತಿಸಿದ ಕಾರಣ ಸದರಿ ಪೋಟೋವನ್ನು ನಿಪಿಃ7 ಎಂದು ಗುರುತಿಸಲಾಯಿತು. ಪೋಟೋವನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನಕ್ಕೆ ಪೋಲೀಸರು ಯಾವ ಕಾರಣಕ್ಕೆ ನನ್ನನ್ನು ಕರೆಸಿದ್ದರು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲು: ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿಃ28.11.2017 ರಂದು ನನ್ನನ್ನು ಪಂಚರಾಗಿ ಬರಬೇಕೆಂದು ನಿಪಿಃ5 ರಂತೆ ನೋಟೀಸನ್ನು ನೀಡಿದ್ದರು ಎಂದರೆ ಸರಿಯಲ್ಲ. ಆ ಪ್ರಕಾರ ನಾನು ಡಿ.ವಾಯ್.ಎಸ್.ಪಿ. ಕಚೇರಿ ಚಿಕ್ಕೋಡಿಗೆ ಹಾಜರಾಗಿದ್ದು, ಅಲ್ಲಿ ಈ ಪ್ರಕರಣದ 2 ನೇ ಆರೋಪಿಯಾದಂತ ಅವುಲ ರಂಗಯ್ಯ ತಂದೆ ರಾಮುಲು ಹಾಜರು ಇದ್ದು, ಸದರಿಯವರನ್ನು ಪೋಲೀಸರು ನನ್ನ ಸಮಕ್ಷಮದಲ್ಲಿ ವಿಚಾರಣೆ ಮಾಡಿದಾಗ ಸದರಿ ಆರೋಪಿತರನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನ್ನ ಹತ್ತಿರ 17 ದಾಖಲೆಗಳು ಇವೆ ಎಂದು ಹೇಳಿ ಅವುಗಳನ್ನು ಪೋಲೀಸರ ಮುಂದೆ ಹಾಜರು ಪಡಿಸಿದರು

ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಅಮಾನತ್ತು ಮಾಡಿಕೊಂಡು ಆ ದಿನ ಮುಂಜಾನೆ 10.00 ರಿಂದ 11.00 ಗಂಟೆಯವರೆಗೆ ನಿಪಿಃ3 ರಂತೆ ಪಂಚನಾಮೆ ಮಾಡಿ ಅದರಲ್ಲಿರುವ ಅಂಶಗಳನ್ನು ನನಗೆ ಓದಿ ಹೇಳಿದ ನಂತರ ನಾನು ನಿಪಿಃ3 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

2. ಅದೇ ದಿನ ನನ್ನನ್ನು ಅಪರಾಧ ಸ್ಥಳದ ಪಂಚರಾಗಿ ಬರಬೇಕೆಂದು ನಿಪಿಃ6 ರಂತೆ ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನೋಟೀಸು ನೀಡಿದ ನಂತರ, ಪೋಲೀಸರೊಂದಿಗೆ ನಾನು ಚಿಂಚಲಿ ಗ್ರಾಮದ ಪಾಂಡುರಂಗ ಅಪ್ಪಾಜಿಗೋಳ ಇವರ ಜಮೀನ ಸರ್ವೆ ನಂ.66 ರಲ್ಲಿ ಕರೆದುಕೊಂಡು ಹೋಗಿದ್ದು, ಅಲ್ಲಿ ಹಾಜರು ಇದ್ದಂತ ಪಾಂಡುರಂಗ ಅಪ್ಪಾಜಿಗೋಳ ತೋರಿಸಿದಂತೆ ಘಟನಾ ಸ್ಥಳದ ಪಂಚನಾಮೆಯನ್ನು ನಿಪಿಃ4 ರಂತೆ ಆ ದಿನ ಬೆಳಿಗ್ಗೆ 11.30 ರಿಂದ ಮದ್ಯಾಹ್ನ 12.30 ಗಂಟೆಯವರೆಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಆರೋಪಿತರು ಜೀತ ಕಾರ್ಮಿಕರನ್ನು ಶೆಡ್ಡಿನಲ್ಲಿ ಬಂದಿಯಾಗಿ ಇರಿಸಿಕೊಂಡಿದ್ದರು ಎಂದು ಪಾಂಡುರಂಗ ಅಪ್ಪಾಜಿಗೋಳ ಅವರು ಪೋಲೀಸರಿಗೆ ಹೇಳಿದರು ಎಂದರೆ ಸರಿಯಲ್ಲ. ನಿಪಿಃ7 ಪೋಟೋವನ್ನು ಸದರಿ ಪಂಚನಾಮೆ ಸಂದರ್ಭದಲ್ಲಿ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

3. ನಾನು 2 ನೇ ಆರೋಪಿ ಗದ್ದಮ ರಂಗಯ್ಯ @ ರಾಮಯ್ಯ ಇವರನ್ನು ನೋಡಿದ್ದರೂ ಸಹ ಮತ್ತು ಸದರಿಯವರು ಪೋಲೀಸರ ಮುಂದೆ 17 ದಾಖಲೆಗಳನ್ನು ಹಾಜರು ಪಡಿಸಿದ್ದರೂ ಸಹ ಇಲ್ಲ ಎಂದು ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಶ್ರೀ. ಬಿ ಜೆ ಜಿ ವಕೀಲರಿಂದ ಆರೋಪಿತರ ಪರವಾಗಿ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನ ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.